ಈ) 1) ಲೋಕೋಪಯೋಗಿ ಇಲಾಖೆ ಅಡಿ 32 ಹಾಗೂ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ಇಲಾಖೆ ಅಡಿ 75 ಗ್ಯಾಂಗ್ ಮೆನ್‌ಗಳು ಇದ್ದಾರೆ.

2) ಸಾಧಾರಣವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ 5 ಕಿ.ಮೀಗೆ ಒಬ್ಬರಂತೆ, ರಾಜ್ಯ ಹೆದ್ದಾರಿ ಮತ್ತು ಮುಖ್ಯ ಜಿಲ್ಲಾ ರಸ್ತೆಗಳಿಗೆ 10 ಕಿ.ಮೀಗೆ ಒಬ್ಬರಂತೆ, ಗ್ಯಾಂಗ್ ಮನ್ ಇರಬೇಕಾಗುತ್ತದೆ. ಇತರೆ ರಸ್ತೆಗಳಿಗೆ ಕಾಮಗಾರಿಗಳ ಅವಶ್ಯಕತೆಯಂತೆ. ಗ್ಯಾಂಗ್‌ಮೆನ್‌ಗಳು ಇರಬೇಕು. ಇದಕ್ಕೆ ನಿರ್ದಿಷ್ಟವಾಗಿ ಇಷ್ಟೇ ಇರಬೇಕೆಂಬ ನಿಯಮ ಇರುವುದಿಲ್ಲ.

ಸಿಂಧನೂರು ತಾಲ್ಲೂಕು ಏತ ನೀರಾವರಿ ಯೋಜನೆ

395ಎ: ಶ್ರೀ ಬಿ. ಹಂಪನ ಗೌಡ (ಸಿಂಧನೂರು):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವಿರಾ ?

1993–94ನೇ ಸಾಲಿನಲ್ಲಿ ಸಿಂಧನೂರು ತಾಲ್ಲೂಕು ಒಳಬಳ್ಳಾರಿ ಏತ ನೀರಾವರಿ ಯೋಜನೆಯನ್ನು ಮಂಜೂರಾತಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಈ ಯೋಜನೆಯ ಶಕ್ಯತೆ ಬಗ್ಗೆ ಇನ್ನು ಪರಿಶೀಲಿಸಬೇಕಾಗಿದೆ. ಶಕ್ಯವೆಂದು ಕಂಡು ಬಂದ ನಂತರವೇ ಕೈಗೆತ್ತಿಕೊಳ್ಳುವ ಪ್ರಶ್ನೆ ಉದ್ಭವಿಸುವುದು.

ತುಂಗಭದ್ರ ಜಲಾಶಯದ ವ್ಯಾಪ್ತಿಯಲ್ಲಿ ಉಪಕಾಲುವೆಗಳ ದುರಸ್ತಿ

395–ಬಿ: ಶ್ರೀ ಬಿ. ಹಂಪನಗೌಡ (ಸಿಂಧನೂರು):– ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಜಲಾಶಯದ ವ್ಯಾಪ್ತಿಯಲ್ಲಿ ಬರುವ 36ನೇ ಉಪ ಕಾಲುವೆ, 40ನೇಯ ಉಪಕಾಲುವೆಗಳ ದುರಸ್ತಿ ಕೆಲಸ ಮಾಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಇದ್ದಲ್ಲಿ ಎನ್‌ಡಬ್ಲ್ಯೂಎಂಪಿಯಲ್ಲಿ ಯೋಜನೆ ಏಕೆ ನೇಮಿಸಬಾರದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) 36ನೇ ಉಪ ಕಾಲುವೆ ದುರಸ್ತಿಯ ಕೆಲಸ ಮಾಡಿಸಲು ಉದ್ದೇಶಿಸಲಾಗಿದೆ. 40ನೇ ಉಪ ಕಾಲುವೆಯ ದುರಸ್ತಿ ಕೆಲಸ ಮಾಡಲು ಉದ್ದೇಶಿಸಲಾಗಿಲ್ಲ.

ಆ) ಪರಿಶೀಲಿಸಲಾಗುವುದು

ತುಂಗಭದ್ರ ಜಲಾಶಯದಲ್ಲಿ ಹೂಳು ತುಂಬಿರುವ ವಿಷಯ

396: ಶ್ರೀ ಬಿ. ಹಂಪನಗೌಡ (ಸಿಂಧನೂರು):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಹೂಳು ತೆಗೆಯಲು ತಗಲುವ ವೆಚ್ಚವೆಷ್ಟು ?